# ಭಾರತೀಯ ಸಂಸ್ಕೃತಿಯ ಹಿರಿಮೆ

ಸ್ವಾಮಿ ವಿವೇಕಾನಂದ

ಭಾರತೀಯ ಸಂಸ್ಕೃತಿಯ ಪುನರುತ್ಥಾನಕ್ಕೆ ಪ್ರಧಾನ ಕಾರಣರಾದ ಮಹಾ ಚೇತನವೇ ಸ್ವಾಮಿ ವಿವೇಕಾನಂದರು ಎನ್ನಬಹುದು. ಭಾರತದ ಇತಿಹಾಸ, ಧರ್ಮ, ಆಧ್ಯಾತ್ಮಿಕತೆ, ಸಂಸ್ಕೃತಿ, ಜನಜೀವನ, ಇತ್ಯಾದಿಗಳ ಬಗ್ಗೆ ಅವರಷ್ಟು ಸಮಗ್ರವಾಗಿ ಮತ್ತು ಆಳವಾಗಿ ತಿಳಿದುಕೊಂಡವರು ಇನ್ನೊಬ್ಬರಿಲ್ಲವೆಂದರೆ ತಪ್ಪಾಗದು. ಸ್ವಾಮೀಜಿಯವರ ಕೃತಿಶ್ರೇಣಿಯ ಸಂಪುಟಗಳಲ್ಲಿ ಅವರ ವಿವಿಧ ಉಪನ್ಯಾಸಗಳಲ್ಲೂ, ಲೇಖನಗಳಲ್ಲೂ, ಸಂಭಾಷಣೆಗಳಲ್ಲೂ ಭಾರತದ ಸಂಸ್ಕೃತಿಯನ್ನು ಕುರಿತ ಅವರ ಅಭಿಪ್ರಾಯಗಳು ವಿಪುಲವಾಗಿ ಮೂಡಿಬಂದಿವೆ. ಅವನ್ನು ಒಂದೆಡೆ ಕಲೆಹಾಕುವ ಪ್ರಯತ್ನವನ್ನಿಲ್ಲಿ ಮಾಡಲಾಗಿದೆ. ವಿಷಯಗಳಿಗೆ ಅನುಗುಣವಾಗಿ ಮೂರು ವಿಭಾಗ ಮಾಡಿ, ಈ ಸಂಕಲನಕ್ಕೆ ಲೇಖನದ ರೂಪವನ್ನು ನೀಡಲಾಗಿದೆ. ನವಭಾರತದ ನಿರ್ಮಾಣವನ್ನು ಅದರ ಸಾಂಸ್ಕೃತಿಕ ನೆಲೆಗಟ್ಟಿನ ಮೇಲೆ ಮಾಡಬೇಕೆಂಬುದೇ ಸ್ವಾಮೀಜಿಯವರ ಆಶಯವಾಗಿತ್ತು ಎಂಬ ಅಂಶ ಇಲ್ಲಿ ಸ್ಪಷ್ಟವಾಗಿದೆ



## ನಮ್ಮ ಇತಿಹಾಸ

ಜಗತ್ತಿನ ಎಷ್ಟೋ ಬಲಾಢ್ಯ ಮತ್ತು ಪ್ರಖ್ಯಾತ ರಾಷ್ಟ್ರಗಳಿಂದ ಗಹನ ಭಾವನೆಗಳು ಉದಯಿಸಿವೆ. ಗತಕಾಲದಲ್ಲಿ ಮತ್ತು ವರ್ತಮಾನ ಕಾಲದಲ್ಲಿ ಒಂದು ಜನಾಂಗದಿಂದ ಮತ್ತೊಂದು ಜನಾಂಗಕ್ಕೆ ಅದ್ಭುತ ಭಾವನೆಗಳು ಹರಡಿವೆ. ಪ್ರಾಚೀನ ಮತ್ತು ಆಧುನಿಕ ಕಾಲಗಳಲ್ಲಿ ಜನಜಾಗೃತಿಯ ಮಹಾ ಪ್ರವಾಹವು ಉದಾತ್ತ ಸತ್ಯಗಳ ಮತ್ತು ಶಕ್ತಿಯ ಬೀಜವನ್ನು ಪ್ರಪಂಚಕ್ಕೆ ಬಿತ್ತಿದೆ. ಆದರೆ ನನ್ನ ಸ್ನೇಹಿತರೇ, ಇದನ್ನು ಗಮನಿಸಿ : ಅದನ್ನು ಸಾರಿದ್ದು ಸಮರ ಕಹಳೆಯ ಧ್ವನಿಯಿಂದ, ದಿಗ್‌ಭಿತ್ತಿ ಬಿರಿಯುವ ಪ್ರಚಂಡ ಸೇನಾ ಸಮೂಹದ ಚಲನದ ಪ್ರಭಾವದಿಂದ; ಪ್ರತಿಯೊಂದು ಭಾವನೆಯನ್ನೂ ರಕ್ತಪ್ರವಾಹದಲ್ಲಿ ತೋಯಿಸಬೇಕಾಯಿತು. ಪ್ರತಿಯೊಂದು ಭಾವನೆಯೂ ಕೋಟ್ಯಂತರ ಜನರ ರಕ್ತದ ಮೂಲಕ ಸಾಗಿಹೋಗಬೇಕಾಯಿತು ಪ್ರತಿಯೊಂದು ಶಕ್ತಿದಾಯಕ ಪದದ ಮುಂದೆಯೂ ಲಕ್ಷಾಂತರ ಜನರ ನಿಟ್ಟುಸಿರು, ಅನಾಥರ, ವಿಧವೆಯರ ಕಣ್ಣೀರಿನ ಕೋಡಿ ಹರಿಯ ಬೇಕಾಯಿತು. ಅನ್ಯರಾಷ್ಟ್ರಗಳು ಇತರರಿಗೆ ಬೋಧಿಸಿರುವುದು ಹೀಗೆ. ಆದರೆ ಭರತಖಂಡವು ಸಹಸ್ರಾರು ವರ್ಷಗಳಿಂದ ಶಾಂತವಾಗಿ ಬಾಳಿದೆ. ಗ್ರೀಸ್ ಇನ್ನೂ ಹುಟ್ಟದೆ ಇದ್ದಾಗ, ರೋಮ್ ದೇಶದ ಕಲ್ಪನೆಯೇ ಇರದಿದ್ದಾಗ, ಆಧುನಿಕ ಪಾಶ್ಚಾತ್ಯ ಜನಾಂಗದ ಪೂರ್ವಿಕರು ಕಾನನಾಂತರಗಳಲ್ಲಿ ನೆಲಸಿ, ಕಾಡುಮನುಷ್ಯರಂತೆ ಮೈಗೆ ಬಣ್ಣ ಬಳಿದುಕೊಳ್ಳುತ್ತಿದ್ದ ಕಾಲದಲ್ಲೇ ನಮ್ಮ ನಾಡು ಪ್ರಬುದ್ಧವಾಗಿತ್ತು. ಇತಿಹಾಸದ ದಾಖಲೆಗೆ ಕೂಡ ನಿಲುಕದ ಪುರಾತನಕಾಲದಿಂದಲೂ, ನಮ್ಮ ಆಚಾರ ವ್ಯವಹಾರಗಳ ಬಗೆಗೂ ನಿಲುಕದ ಗತಕಾಲದಿಂದಲೂ, ಅನಾದಿ ಕಾಲದಿಂದ ಇಂದಿನವರೆಗೂ ಮಹೋನ್ನತ ಭಾವನಾಪರಂಪರೆ ಇಲ್ಲಿಂದ ಹೊರಹೊಮ್ಮಿದೆ. ಈ ದೇಶದ ಜನರು ಆಡಿದ ಪ್ರತಿಯೊಂದು ಮಾತಿನ ಹಿಂದೆಯೂ ಆಶೀರ್ವಾದದ ಬಲವಿದೆ. ಮುಂದೆ ಶಾಂತಿ ಇದೆ. ಪ್ರಪಂಚದಲ್ಲಿ ನಾವು ಇತರ ರಾಷ್ಟ್ರಗಳಂತೆ ಮತ್ತೊಬ್ಬರನ್ನು ಗೆಲ್ಲಲಿಲ್ಲ. ಈ ಆಶೀರ್ವಾದ ನಮ್ಮ ಮೇಲಿರುವುದು, ಅದಕ್ಕೆಯೇ ನಾವಿನ್ನೂ ಜೀವಿಸಿರುವೆವು. *(೩.೪)**

ಯಾವ ವೇದದಲ್ಲಿ, ಯಾವ ಸೂಕ್ತದಲ್ಲಿ ಆರ್ಯರು ಪರದೇಶದಿಂದ ಬಂದರೆಂಬುದನ್ನು ನೋಡುವಿರಿ? ಆದಿವಾಸಿ ಜನರನ್ನು ಕೊಂದರು ಎಂಬುದಕ್ಕೆ ಆಧಾರವೆಲ್ಲಿ? ಇಂತಹ ಪ್ರಲಾಪದಿಂದ ಪ್ರಯೋಜನವೇನು? ರಾಮಾಯಣವನ್ನು ಓದಿ ಸಾರ್ಥಕವಾಯಿತು. ಅದರ ಆಧಾರದ ಮೇಲೆ ಇಂತಹ ಸುಳ್ಳನ್ನು ಏತಕ್ಕೆ ತಯಾರು ಮಾಡುವಿರಿ?

ರಾಮಾಯಣವೆಂದರೇನು? ಆರ್ಯರು ದಂಡಕಾರಣ್ಯವನ್ನು ಜಯಿಸಿದ ಕಥೆಯೆ? ರಾಮಚಂದ್ರ, ಸುಸಭ್ಯ ಜನಾಂಗದ ದೊರೆ. ಅವನು ಯಾರೊಂದಿಗೆ ಯುದ್ಧಮಾಡುವನು? ಲಂಕಾ ನಗರಿಯ ರಾಜನಾದ ರಾವಣನೊಡನೆ. ದಯವಿಟ್ಟು ರಾಮಾಯಣವನ್ನು ಇನ್ನೊಮ್ಮೆ ಓದಿ. ರಾವಣ ರಾಮನಿಗಿಂತ ಹೆಚ್ಚು ನಾಗರಿಕನಾಗಿದ್ದನು, ಕಡಿಮೆಯಿಲ್ಲ. ಲಂಕಾ ಸಂಸ್ಕೃತಿ ಅಯೋಧ್ಯೆಯ ಸಂಸ್ಕೃತಿಗಿಂತ ಕೀಳಲ್ಲ, ಮೇಲಾಗಿತ್ತು. ವಾನರರು ಮತ್ತು

* ಇಲ್ಲಿ ಕೊಟ್ಟಿರುವ ಸಂಖ್ಯೆಗಳು 'ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ'ಯ ಸಂಪುಟ ಸಂಖ್ಯೆ ಹಾಗೂ ಪುಟಸಂಖ್ಯೆಗಳನ್ನು ಸೂಚಿಸುತ್ತವೆ.

ಇತರ ದಕ್ಷಿಣ ಇಂಡಿಯಾದವರನ್ನು ಎಂದು ಗೆದ್ದದ್ದು? ಅವರೆಲ್ಲ ರಾಮಚಂದ್ರನ ಸ್ನೇಹಿತರು. ರಾಮಚಂದ್ರ ಯಾವ ವಾಲಿಯ, ಯಾವ ಗುಹಕನ ರಾಜ್ಯವನ್ನು ಆಕ್ರಮಿಸಿದನು?

ಕೆಲವು ಕಡೆ ಆರ್ಯರಿಗೂ ದಸ್ಯುಗಳಿಗೂ ಯುದ್ಧ ನಡೆದಿರ ಬಹುದು. ಕೆಲವು ಕಪಟ ಋಷಿಗಳು ಬಕಧ್ಯಾನ ಮಾಡಿ ಯಾವಾಗ ದಸ್ಯುಗಳು ಬಂದು ತಮಗೆ ವಿಘ್ನ ತಂದಾರು ಎಂದು ಕಾಯು ತ್ತಿದ್ದರು, ಕೆಲವು ವೇಳೆ ಹಾಗೆ ತೊಂದರೆ ಕೊಟ್ಟಾಗ ತಕ್ಷಣ ಊರಿಗೆ ಹೋಗಿ ರಾಜನಿಗೆ ದೂರು ಹೇಳುವರು. ಅವರು ಶಸ್ತ್ರಾಸ್ತ್ರ ಸನ್ನದ್ಧ ರಾಗಿ ಬಂದು ದಸ್ಯುಗಳೊಡನೆ ಯುದ್ಧ ಮಾಡುತ್ತಿದ್ದರು. ಪಾಪ ದಸ್ಯುಗಳು ಕೋಲುಕಲ್ಲುಗಳೊಡನೆ ಎಷ್ಟುಕಾಲ ತಾನೆ ಯುದ್ಧ ಮಾಡಿಯಾರು? ಅವರು ಹತರಾದರು, ಇಲ್ಲವೆ ಓಡಿ ಹೋದರು. ಇದರಲ್ಲಿ ಕೆಲವು ಕಥೆಗಳು ನಿಜವಾಗಿರಬಹುದು. ಆದರೂ ಆರ್ಯರು ಅವರ ಊರನ್ನು ಸ್ವಾಧೀನ ಪಡಿಸಿಕೊಂಡರು ಎನ್ನು ವುದಕ್ಕೆ ಆಧಾರವೆಲ್ಲಿರುವುದು? ರಾಮಾಯಣದಲ್ಲಿ ಎಲ್ಲಿ ನಿಮಗೆ ಆಧಾರ ಸಿಗುವುದು?

ಆರ್ಯ ಸಭ್ಯತಾರೂಪಿ ವಸ್ತ್ರಕ್ಕೆ ವಿಶಾಲ ನದಿ, ನದ, ಉಷ್ಣ ಪ್ರಧಾನ ಸಮತಲ ಕ್ಷೇತ್ರ ಮಗ್ಗ. ನಾನಾ ಪ್ರಕಾರ ಸುಸಭ್ಯ, ಅರ್ಧ ಸಭ್ಯ ಅಸಭ್ಯ ಆರ್ಯ ಪ್ರಧಾನ ಮನುಷ್ಯರೇ ಈ ವಸ್ತ್ರಕ್ಕೆ ಹತ್ತಿ. ಇದರ ತಂತು ವರ್ಣಾಶ್ರಮಾಚಾರ; ಅದರ ಗುರಿ ಪ್ರಕೃತಿ ದ್ವಂದ್ವ ಮತ್ತು ಸಂಘರ್ಷಣೆಯ ನಿವಾರಣೆ.

ಐರೋಪ್ಯರೇ ! ನೀವು ಯಾವ ದೇಶವನ್ನು ಮುಂದಕ್ಕೆ ತಂದಿರು ವಿರಿ? ಎಲ್ಲಿ ಅಬಲ ಜನಾಂಗವಿತ್ತೊ ಅದನ್ನು ಆಮೂಲಾಗ್ರವಾಗಿ ನಾಶಮಾಡಿರುವಿರಿ. ನೀವು ಅವರ ಸ್ಥಳವನ್ನು ಆಕ್ರಮಿಸಿರುವಿರಿ, ಅವರು ನಿರ್ನಾಮರಾದರು. ನಿಮ್ಮ ಅಮೇರಿಕಾ, ನ್ಯೂಜಿಲೇಂಡ್, ಆಸ್ಟ್ರೇಲಿಯಾ ಶಾಂತಿಸಾಗರದ ದ್ವೀಪಗಳು, ದಕ್ಷಿಣ ಆಫ್ರಿಕಾ, ಇವುಗಳ ಚರಿತ್ರೆ ಏನು? ಅಲ್ಲಿಯ ಆದಿವಾಸಿಗಳು ಇಂದೆಲ್ಲಿ? ಅವರನ್ನೆಲ್ಲಾ ನಾಶ ಮಾಡಿದಿರಿ. ಕಾಡುಮೃಗಗಳಂತೆ ಅವರನ್ನು ಬೇಟೆಯಾಡಿದಿರಿ. ಎಲ್ಲಿ ನಿಮಗೆ ನಾಶ ಮಾಡುವುದಕ್ಕೆ ಸಾಧ್ಯ ವಾಗಲಿಲ್ಲವೊ ಅಲ್ಲಿ ಮಾತ್ರ ಜನ ಜೀವಿಸಿರುವರು.

ಭಾರತವರ್ಷ ಹೀಗೆ ಎಂದೂ ಆಚರಿಸಲಿಲ್ಲ. ಆರ್ಯರು ಬಹಳ ದಯಾಳುಗಳು, ಅವರಿಗೆ ಅಖಂಡ ಸಮುದ್ರದಂತೆ ವಿಶಾಲ ಹೃದಯವಿತ್ತು. ದೈವೀ ಪ್ರತಿಭಾ ಸಂಪನ್ನ ಬುದ್ಧಿಶಕ್ತಿ ಇತ್ತು. ಅಲ್ಲಿ ಕ್ಷಣಿಕವೂ, ತೋರಿಕೆಗೆ ರಮಣೀಯವೂ ಆದರೆ ನಿಜ ವಾಗಿ ಪಾಶವಿಕವಾದ ಭಾವನೆ ಎಂದಿಗೂ ಇರಲಿಲ್ಲ. ನಮ್ಮ ದೇಶದ ಮೂರ್ಖರೇ! ಆರ್ಯರು ಕಾಡುಜನಾಂಗವನ್ನು ನಾಶ ಮಾಡಿದರೆ ವರ್ಣಾಶ್ರಮವನ್ನು ಏಕೆ ಸೃಷ್ಟಿಸುತ್ತಿದ್ದರು?

ಐರೋಪ್ಯರ ಉದ್ದೇಶ ಎಲ್ಲರನ್ನೂ ನಾಶಮಾಡಿ ತಾವು ಮಾತ್ರ ಬದುಕ ಬೇಕೆಂಬುದು. ಆರ್ಯರ ಉದ್ದೇಶ ಎಲ್ಲರನ್ನು ತಮ್ಮ ಸಮನಾಗಿ ಮಾಡಬೇಕು, ತಮಗಿಂತ ಉತ್ತಮರನ್ನಾಗಿ ಮಾಡ ಬೇಕೆಂಬುದು. ಯೂರೋಪಿನಲ್ಲಿ ಸಭ್ಯತೆಗೆ ದಾರಿ ಖಡ್ಗದ ಮೂಲಕ. ಭರತಖಂಡದಲ್ಲಿ ವರ್ಣದ ವಿಭಾಗದ ಮೂಲಕ. ಒಬ್ಬನ ಶಿಕ್ಷಣ ಮತ್ತು ಸಭ್ಯತೆಗೆ ತಕ್ಕಂತೆ ಮೇಲೇರಿಹೋಗಲು ಇರುವ ಮೆಟ್ಟಲು ಸಾಲು ವರ್ಣವಿಭಾಗ. ಯೂರೋಪಿನಲ್ಲಿ ಬಲಶಾಲಿಗೇ ಜಯ, ಬಲಹೀನನಿಗೆ ಮೃತ್ಯು. ಭರತವರ್ಷದಲ್ಲಿ ಪ್ರತ್ಯೇಕ ಸಾಮಾಜಿಕ ನಿಯಮಗಳಿರುವುದು ದುರ್ಬಲರ ರಕ್ಷಣೆಗಾಗಿ. *(೩.೩೯೧-೯೨)*

## ಭಾರತದ ವೈಶಿಷ್ಟ್ಯ

ನಮ್ಮ ಸಂಸ್ಕೃತಿ ಹೇಗಿರುವುದು? ಆರ್ಯರು ಶಾಂತಿ ಪ್ರಿಯರು. ಕೃಷಿಯಿಂದ ಜೀವಿಸುವರು. ತಮ್ಮ ಸಂಸಾರವನ್ನು ಆತಂಕವಿಲ್ಲದೆ ಸಾಕಿ ಸಲಹುವುದಕ್ಕೆ ಯಥೇಷ್ಟವಾದ ಅವಕಾಶ ದೊರಕಿದರೆ ಅದರಿಂದಲೇ ಅವರಿಗೆ ಸಂತೋಷ ಮತ್ತು ತೃಪ್ತಿ. ಅಂತಹ ಬದುಕಿನಲ್ಲಿ ಜನರಿಗೆ ಹೆಚ್ಚು ಬಿಡುವು ದೊರಕುತ್ತದೆ. ಚಿಂತನಶೀಲರಾಗಿ ನಾಗರಿಕತೆಯನ್ನು ಬೆಳೆಸುವುದಕ್ಕೆ ಆಗ ಹೆಚ್ಚಿನ ಅವಕಾಶ ದೊರಕುತ್ತದೆ. ಜನಕ ಮಹಾರಾಜನು ತಾನೇ ಕೈಗಳಿಂದ ನೆಲವನ್ನು ಉಳುತ್ತಿದ್ದ. ಆ ಕಾಲದಲ್ಲಿ ಅವನೇ ಸರ್ವಶ್ರೇಷ್ಠ ಆತ್ಮ ಜ್ಞಾನಿಯಾಗಿದ್ದ. ಮೊದಲಿನಿಂದಲೂ ಇಲ್ಲಿ ಋಷಿ, ಮುನಿ, ಯೋಗಿಗಳು ಜನಿಸಿದರು. ಮೊದಲಿನಿಂದಲೇ ಅವರು ಸಂಸಾರ ಮಿಥ್ಯೆ ಎಂಬುದನ್ನು ಅರಿತಿದ್ದರು. ಜಗಳ ಕದನಗಳಿಂದ ಪ್ರಯೋ ಜನವಿಲ್ಲ , ಯಾವ ಸುಖವನ್ನು ಹುಡುಕುತ್ತಿರುವಿರೋ ಅದು ದೊರಕುವುದು ಶಾಂತಿಯಿಂದ. ಆ ಶಾಂತಿ ಸಿಗಬೇಕಾದರೆ ಶರೀರ ಭೋಗ ವಿಸರ್ಜಿಸಬೇಕು. ಸುಖವು ದೇಹ ಪೋಷಣೆಯಿಂದ ಸಿಗುವುದಿಲ್ಲ, ಮನಸ್ಸು ಬುದ್ಧಿಗಳನ್ನು ರೂಢಿಸುವುದರಿಂದ ಮಾತ್ರ ದೊರಕುವುದು.

ಜ್ಞಾನಿಗಳು ಕಾಡುಗಳನ್ನು ಕಡಿದು ಅವನ್ನು ಕೃಷಿಗೆ ಯೋಗ್ಯ ವಾದ ಭೂಮಿಯನ್ನಾಗಿ ಮಾಡಿದರು. ಅಂಥ ಭೂಮಿಯಲ್ಲಿ ಯಜ್ಞವೇದಿಕೆಯನ್ನು ಕಟ್ಟಿದರು. ಇಲ್ಲಿಂದ ಯಜ್ಞಧೂಮವು ನಿರ್ಮಲಾಕಾಶಕ್ಕೆ ಏರಿತು. ಆ ಶಾಂತ ವಾತಾವರಣದಲ್ಲಿ ವೇದ ಮಂತ್ರಗಳು ಪ್ರತಿಧ್ವನಿತಗೊಂಡುವು. ದನಕರುಗಳು ಯಾವ ಅಂಜಿ ಕೆಯೂ ಇಲ್ಲದೆ ಅಲ್ಲಿ ಮೇಯತೊಡಗಿದವು. ವಿದ್ಯೆ ಮತ್ತು ಧರ್ಮದ ಪದತಳದಲ್ಲಿ ಖಡ್ಗ ನಿಂತಿತು. ಖಡ್ಗದ ಏಕೈಕ ಕಾರ್ಯ ಧರ್ಮರಕ್ಷಣೆ, ಜನ ಮತ್ತು ದನದ ಪಾಲನೆ. ಆಪತ್ತಿನಲ್ಲಿರುವವ ರನ್ನು ರಕ್ಷಿಸುವವನು ಕ್ಷತ್ರಿಯನಾದ. ನೇಗಿಲು ಮತ್ತು ಕತ್ತಿಯನ್ನು ಆಳುತ್ತಿದ್ದುದು ಸರ್ವರಕ್ಷಕವಾದ ಧರ್ಮ. ಅದೇ ರಾಜರ ರಾಜ. ನಿದ್ರಿಸುವಾಗಲೂ ಅದು ಚಿರಜಾಗ್ರತವಾಗಿರುವುದು. ಧರ್ಮದ ಆಶ್ರಯದಲ್ಲಿ ಎಲ್ಲರೂ ಸ್ವತಂತ್ರರಾಗಿದ್ದರು.

ಆರ್ಯರೆನ್ನುವರು ಹೊರಗಡೆಯಿಂದ ಭರತಖಂಡದ ಮೇಲೆ ದಾಳಿಯಿಟ್ಟು ಇಲ್ಲಿನ ಆದಿವಾಸಿ ಜನರ ಭೂಮಿಯನ್ನು ಕಬಳಿಸಿ, ಅವರನ್ನು ನಿರ್ನಾಮಗೊಳಿಸಿ ಇಲ್ಲಿ ನೆಲಸಿದರು ಎಂದು ಯೂರೋ ಪಿನ ಪಂಡಿತರು ಹೇಳುವುದು ಶುದ್ಧ ಅರ್ಥಹೀನ. ಆಶ್ಚರ್ಯ

ವೆಂದರೆ ನಮ್ಮ ಪಂಡಿತರೂ ಅದಕ್ಕೆ ತಥಾಸ್ತು ಹೇಳುತ್ತಾರೆ. ಈ ಭಯಂಕರ ಸುಳ್ಳುಗಳನ್ನೆಲ್ಲ ನಮ್ಮ ಮಕ್ಕಳಿಗೆ ಬೋಧಿಸಲಾಗುತ್ತಿದೆ. ಇದು ಮಹಾ ಅನ್ಯಾಯ. *(೩.೭೪೯-೯೦)*

ತ್ಯಾಗವೇ ಭಾರತದ ಸನಾತನ ಪತಾಕೆ. ಇದನ್ನೇ ಭರತಖಂಡ ಪ್ರಪಂಚದಲ್ಲೆಲ್ಲಾ ಹಾರಿಸುವುದು. ನಾಶವಾಗುತ್ತಿರುವ ಜನಾಂಗಗಳಿಗೆ, ಎಲ್ಲಾ ದುರಾಚಾರಿಗಳಿಗೆ, ದೌರ್ಜನ್ಯಪರರಿಗೆ, ಪದೇ ಪದೇ ''ತ್ಯಾಗ'' ಎಂಬ ಸಂದೇಶದಿಂದ ಎಚ್ಚರಿಕೆ ಕೊಡುತ್ತದೆ. ಹಿಂದೂಗಳೇ, ಈ ಪತಾಕೆಯನ್ನು ಎಂದಿಗೂ ತ್ಯಜಿಸಬೇಡಿ. ಅದನ್ನು ಎತ್ತಿ ಹಿಡಿಯಿರಿ. ನೀವು ದುರ್ಬಲರಾಗಿ ತ್ಯಾಗ ಮಾಡುವುದಕ್ಕೆ ಶಕ್ತಿ ಇಲ್ಲದೇ ಇದ್ದರೂ ಆದರ್ಶವನ್ನು ಕೆಳಗೆ ಎಳೆಯಬೇಡಿ. ''ನನ್ನ ಕೈಲಾಗುವುದಿಲ್ಲ. ನಾನು ತ್ಯಜಿಸಲಾರೆ'' ಎನ್ನಿ. ಆದರೆ ಮಿಥ್ಯಾಚಾರಿಗಳಾಗಬೇಡಿ. ಗ್ರಂಥಪೀಡನೆ ಮಾಡಬೇಡಿ, ವಾದ ಮಾಡಬೇಡಿ. ಇತರರ ಕಣ್ಣಿಗೆ ಮಣ್ಣು ಹಾಕಲು ಪ್ರಯತ್ನಿಸಬೇಡಿ. ಇದನ್ನು ಮಾಡಬೇಡಿ. ನಮ್ಮ ಕೈಲಾಗುವುದಿಲ್ಲ ಎಂದು ಒಪ್ಪಿಕೊಳ್ಳಿ. ತ್ಯಾಗಭಾವನೆ ಅತಿ ಶ್ರೇಷ್ಠವಾದುದು. ಕೋಟ್ಯಂತರ ಜನರು ಸೋತು ಕೇವಲ ಹತ್ತು ಅಥವಾ ಒಬ್ಬರೇ ಜಯಶಾಲಿಗಳಾಗಿ ಹಿಂತಿರುಗಿದರೆ ಏನಂತೆ! ಸತ್ತ ಲಕ್ಷಾಂತರ ಜನರೇ ಧನ್ಯರು. ಅವರು ಬಲಿದಾನವೇ ವಿಜಯವನ್ನು ಸಂಪಾದಿಸಿರುವುದು. ವೈದಿಕ ಸಂಪ್ರದಾಯದ ಒಂದು ಆದರ್ಶ ಈ ತ್ಯಾಗ. ಬೊಂಬಾಯಿ ಪ್ರಾಂತ್ಯದಲ್ಲಿರುವ ವಲ್ಲಭಾಚಾರ್ಯರ ಪಂಗಡ ಒಂದು ಮಾತ್ರ ಇದಕ್ಕೆ ಹೊರತಾಗಿದೆ. ತ್ಯಾಗ ಎಲ್ಲಿಲ್ಲವೊ ಅಲ್ಲಿ ಏನಾಗುವುದೆಂಬುದು ನಿಮ್ಮಲ್ಲಿ ಅನೇಕರಿಗೆ ಗೊತ್ತಿದೆ. ನಮಗೆ ಸಂಪ್ರದಾಯ ಬೇಕು. ಮೈಗೆ ಬೂದಿ ಬಳಿದು ಕೊಳ್ಳುವ, ಕೈಯನ್ನು ಯಾವಾಗಲೂ ಎತ್ತಿರುವ ಭಯಾನಕ ಸಂಪ್ರದಾಯಗಳೂ ಬೇಕು. ಅದು ಅಸ್ವಾಭಾವಿಕವಾದರೂ ನಮಗೆ ಅವು ಬೇಕು. ಅವುಗಳ ಮುಖ್ಯ ಪಲ್ಲವಿಯೇ ತ್ಯಾಗ. ಭರತಖಂಡದಲ್ಲಿ ಧಾಳಿ ಇಡುತ್ತಿರುವ, ನಮ್ಮನ್ನು ಬಲಹೀನರನ್ನಾಗಿ ಮಾಡುವ ಆಮೋದ ಪ್ರಮೋದಗಳಿಗೆ ಬಲಿಯಾಗುವುದಕ್ಕೆ ಮುಂಚೆ, ನಮಗೆ ಎಚ್ಚರಿಕೆ ಕೊಡುವುದಕ್ಕೆ ಈ ತ್ಯಾಗಭಾವನೆ ಬೇಕು. ನಮಗೆ ಸ್ವಲ್ಪ ತಪಸ್ಸು ಬೇಕು. ಪುರಾತನ ಕಾಲದಲ್ಲಿ ತ್ಯಾಗವೇ ಭಾರತವನ್ನು ಗೆದ್ದಿತು, ಈಗ ಅದು ಭಾರತವನ್ನು ಗೆಲ್ಲಬೇಕಾಗಿದೆ. ಈಗಲೂ ಭಾರತದಲ್ಲಿ ತ್ಯಾಗವು ಅತ್ಯುತ್ತಮ ಮತ್ತು ಪರಮಶ್ರೇಷ್ಠ ಆದರ್ಶವಾಗಿದೆ. ಬುದ್ಧ, ರಾಮಾನುಜ, ರಾಮಕೃಷ್ಣ ಪರಮಹಂಸರ ನಾಡಾದ, ಕರ್ಮಕಾಂಡಕ್ಕೆ ವಿರುದ್ಧವಾಗಿ ಬೋಧಿಸಿದ ತ್ಯಾಗಭೂಮಿಯಾದ ಭಾರತದಲ್ಲಿ ಇಂದಿಗೂ ಸರ್ವತ್ಯಾಗಿಗಳಾದ ಜೀವನ್ಮುಕ್ತರಾದ ನೂರಾರು ಮಂದಿ ಇರುವರು. *(೩.೨೦೯)*

## ನಮ್ಮ ಸಂಸ್ಕೃತಿಯ ಹಿರಿಮೆ

ನಾವು ಪಾಶ್ಚಾತ್ಯರಾಗಲಾರೆವು. ಆದ್ದರಿಂದ ಪಾಶ್ಚಾತ್ಯರನ್ನು ಅನುಕರಿಸಿ ಪ್ರಯೋಜನವಿಲ್ಲ. ನೀವು ಪಾಶ್ಚಾತ್ಯರನ್ನು ಅನುಕರಿಸುವುದಕ್ಕೆ ಪ್ರಯತ್ನಪಟ್ಟೊಡನೆಯೇ ನಾಶವಾಗುವಿರಿ, ನೀವು ನಿರ್ಜೀವರಾಗುತ್ತೀರಿ. ಎರಡನೆಯದಾಗಿ ಇದು ಅಸಾಧ್ಯ. ಅನಾದಿ ಕಾಲದಲ್ಲಿ ನದಿ ಒಂದೆಡೆ ಉಗಮಿಸಿದೆ, ಅದು ಸಹಸ್ರಾರು ವರ್ಷಗಳಿಂದ ಒಂದು ದಿಕ್ಕಿನಲ್ಲಿ ಹರಿಯುತ್ತಿದೆ. ಆ ನದಿಯನ್ನು ಹಿಮಾಲಯದಲ್ಲಿರುವ ಅದರ ಮೂಲಸ್ಥಾನಕ್ಕೆ ಹಿಂತಿರುಗಿಸಬಲ್ಲಿರಾ? ಒಂದು ವೇಳೆ ಅದು ಸಾಧ್ಯವಾದರೂ ನೀವು ಪಾಶ್ಚಾತ್ಯರಾಗಲಾರಿರಿ. ಪಾಶ್ಚಾತ್ಯ ದೇಶದಲ್ಲಿ ಬರಿಯ ಕೆಲವು ಶತಮಾನಗಳ ಸಂಸ್ಕೃತಿಯನ್ನು ಅವರಿಗೆ ಕಿತ್ತೊಗೆಯಲು ಸಾಧ್ಯವಿಲ್ಲದೆ ಇರುವಾಗ ಸಹಸ್ರಾರು ವರ್ಷಗಳಿಂದ ಬಂದ ಸಂಸ್ಕೃತಿಯನ್ನು ನೀವು ಕಿತ್ತೊಗೆಯಬಲ್ಲಿರಾ? ಇದು ಸಾಧ್ಯವಿಲ್ಲ. *(೩.೫೫-೬೦)*

ಎಲ್ಲಾ ದೇಶಗಳಿಂದಲೂ ಕಲಿತುಕೊಳ್ಳಿ. ನಿಮಗೆ ಯಾವುದು ಉಪಯೋಗಕರವಾಗುವುದೋ ಅದನ್ನು ತೆಗೆದುಕೊಳ್ಳಿ. ಆದರೆ ನಾವು ಹಿಂದೂಗಳಾದುದರಿಂದ ಸರ್ವವೂ ನಮ್ಮ ರಾಷ್ಟ್ರಧ್ಯೇಯಕ್ಕೆ ಅಧೀನವಾಗಿರಬೇಕು. *(೩.೬೧)*

ನೀವು ಅಧ್ಯಾತ್ಮವನ್ನು ತ್ಯಜಿಸಿ, ಪಾಶ್ಚಾತ್ಯ ನಾಗರಿಕತೆಯ ಆಕರ್ಷಣೆಗೆ ಒಳಗಾದರೆ ಮೂರು ತಲೆಮಾರಿನ ಹೊತ್ತಿಗೆ ನಿಮ್ಮ ಜನಾಂಗ ನಾಶವಾಗುವುದು. ಏಕೆಂದರೆ ಇದರಿಂದ ರಾಷ್ಟ್ರದ ಬೆನ್ನೆಲುಬು ಮುರಿಯುತ್ತದೆ. ಯಾವ ತಳಹದಿಯ ಮೇಲೆ ರಾಷ್ಟ್ರಸೌಧವು ನಿರ್ಮಿತವಾಗಿರುವುದೊ ಅದು ಕುಸಿದು ಬೀಳುತ್ತದೆ. ಇದರ ಪರಿಣಾಮವೇ ಸರ್ವನಾಶ. *(೩.೬೨)*

ಸಂಸ್ಕೃತಿ ಮಾತ್ರ ಆಘಾತವನ್ನು ಸಹಿಸಬಲ್ಲದು. ಕೇವಲ ಜ್ಞಾನರಾಶಿಗೆ ಅದನ್ನು ಎದುರಿಸುವ ಶಕ್ತಿ ಇಲ್ಲ. ಜಗತ್ತಿಗೆ ಜ್ಞಾನರಾಶಿಯನ್ನೇ ಕೊಡಬಹುದು. ಆದರೆ ಅದರಿಂದ ಹೆಚ್ಚು ಪ್ರಯೋಜನವಿಲ್ಲ. ಸಂಸ್ಕೃತಿಯು ರಕ್ತದಲ್ಲಿ ಹರಿಯಬೇಕು. ಆಧುನಿಕ ಕಾಲದಲ್ಲಿ ಬೇಕಾದಷ್ಟು ಜ್ಞಾನಸಂಪತ್ತನ್ನು ಪಡೆದ ದೇಶಗಳನ್ನು ನೋಡಿರುವೆವು. ಆದರೆ ಅದರಿಂದ ಏನು ಪ್ರಯೋಜನ? ಅವರು ವ್ಯಾಘ್ರಗಳಂತೆ, ಕಾಡುಜನರಂತೆ ಇರುವರು. ಅವರಲ್ಲಿ ಸಂಸ್ಕೃತಿ ಇಲ್ಲ. ಅವರ ನಾಗರಿಕತೆಯಂತೆ ಅವರ ಜ್ಞಾನ ಕೂಡ ತೋರಿಕೆಗೆ ಮಾತ್ರ. ಅವರನ್ನು ಸ್ವಲ್ಪ ಕೆರೆದರೆ ಸಾಕು ಕಾಡುಮನುಷ್ಯ ಕಾಣುವನು. ಆಗುವುದೇ ಹೀಗೆ, ಇದೇ ಅಪಾಯ. *(೩.೧೬೪)*

ನನ್ನ ದೇಶಬಾಂಧವರೇ, ನಾನು ಇದನ್ನು ಹೇಳುತ್ತೇನೆ, ಗಮನಿಸಿ. ನಮ್ಮ ದೇಶವನ್ನು ಇತರ ದೇಶಗಳೊಂದಿಗೆ ಮತ್ತು ಜನಾಂಗಗಳೊಂದಿಗೆ ಹೋಲಿಸಿದರೆ ನಮ್ಮ ಜನರು ಹೆಚ್ಚು ಧಾರ್ಮಿಕರು, ದೈವಭಕ್ತರು. ನಮ್ಮ ಸಮಾಜ ವ್ಯವಸ್ಥೆ ಮಾನವ ಕೋಟಿಯ ಕಲ್ಯಾಣಕ್ಕೆ ಅನುಕೂಲಕರವಾಗಿದೆ. ನಮಗೆ ಇಂದು ಯಾವ ಸುಧಾರಣೆಯೂ ಬೇಕಾಗಿಲ್ಲ. ನಮ್ಮ ದೇಶದ ಸಂಸ್ಕೃತಿಗೆ ತಕ್ಕಂತೆ ನಾವು ಬೆಳೆಯಬೇಕು, ಅಭಿವೃದ್ಧಿಯಾಗಬೇಕು. ಇದೇ ನನ್ನ ಆದರ್ಶ. *(೩.೭೯)*